**IN THE COURT OF III ADDL. CIVIL JUDGE & JMFC**
**AT BELGAUM**
**(PRESENTED OVER BY SMT. LAKSHMI G M)**

**O.S./0000900/2013**

**APPELLANTS :**

1. Shri. Mahadev S/o. Kashappa Kamoji
R/o. H.No. 4855/74-A, 2nd Main Road, Sadashiv Nagar, Belgaum-590019

VERSUS

**RESPONDENTS :**

1. Shri. Rajendra S/o. Basavaraj Bellad
R/o. House No. 9/10 RPD cross, Khanapur Road, Tilakwadi, Belgaum. -6

---

Shri. S.S.Halbhavi, Advocate for the appellant.

---

**ಗೌರವಾನ್ವಿತ 3ನೇ ಅಧೀಕ ಸಿವಿಲ್ ಮತ್ತು ಜೆಎಮ್ಎಫಸಿ ನ್ಯಾಯಾಲಯ ಬೆಳಗಾವಿ**

**ಅಸಲು ದಾವಾ ನಂಃ 900-2013**
**ಪಿ. ಡಬ್ಲೂ-1**

**ದಿಃ 14-09-2015 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು.**
**ಪಾಟೀ ಸವಾಲುಃ ಪ್ರತಿವಾದಿ ವಕೀಲರಿಂದ.**

**ನಾನು 1987 ರಲ್ಲಿ ನಿವೃತ್ತಿಯಾಗಿರುತ್ತೇನೆ. ನಿವೃತ್ತಿಯಾದ ನಂತರ ನಾನು ಲಾ ಮಾಡಿ ವಕೀಲ ವೃತ್ತಿಯನ್ನು ಮಾಡುತ್ತಿದ್ದೇನೆ. ಪ್ರತಿವಾದಿಯರು ನೀಡಿರುವ ಕೈಪಿಯತ್ತನ್ನು ನಾನು ನೋಡಿರುತ್ತೇನೆ. ಆರ್ ಎಸ್ 1363 ರಜಪೂತ ವಂಶರವರಿಗೆ ಸೇರಿದ ಆಸ್ತಿ ಎಂದರೆ ಸರಿ. ಸಿದ್ರಾಯ ಯುಳ್ಳೂರಕರ ದಾವಾ ಸರ್ವೆ ನಂಬರದಲ್ಲಿ ಟೆನಂಟ ಆಗಿ ವ್ಯವಸಾಯ ಮಾಡುತ್ತಿದ್ದರು. ದಿಃ 10-01-1952 ರಲ್ಲಿ ಒಟ್ಟು 5 ಎಕರೆ 11 ಗುಂಟೆಯಲ್ಲಿ 2 ಎಕರೆ 20 ಗುಂಟೆ ಜಾಗವನ್ನು ರಜಪೂತರವರಿಂದ ಸಿದ್ರಾಯ ಅವರ ಹೆಂಡತಿ ಜಕ್ಕುಬಾಯಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಖರೀದಿ ಮಾಡಿದ ಜಾಗಕ್ಕೆ 1363ಬಿ-1 ಎಂದು ನಂಬರ ನೀಡಲಾಯಿತು ಎಂದರೆ ಸರಿ. ದಿಃ 10-6-1965 ರಲ್ಲಿ ದಾವಾ ಜಮೀನನ್ನು ಎನ್ ಎ ಮಾಡಬೇಕೆಂದು ಅರ್ಜಿ ನೀಡಿರುತ್ತಾರೆ ಎಂದರೆ ಸರಿ. ಇದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅದನ್ನು ಗುರ್ತಿಸಿರುತ್ತಾರೆ. ಸದರಿ ದಾಖಲಯನ್ನು ನಿಡಿ-1 ಎಂದು ಗುರುತಿಸಲಾಯಿತು. ದಿಃ 25-09-1967 ರ**

ಆದೇಶ ಪ್ರತಿಯನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅದನ್ನು ಗುರ್ತಿಸಿರುತ್ತಾರೆ ಸದರಿ ದಾಖಲೆಯನ್ನು ನಿಡಿ-2 ಎಂದು ಗುರುತಿಸಲಾಯಿತು. ಈ ಇರಡೂ ಆದೇಶಗಳನ್ವಯ ರೆವಿನ್ಯೂ ಇಲಾಖೆಯಲ್ಲಿ ಮಂಜೂರು ಮಾಡಿರುತ್ತಾರೆ ಎಂದರೆ ಸರಿ.

ಸರ್ವೆ ನಂ 1363-ಬಿ-1 ಸದಾಶಿವ ನಗರದಲ್ಲಿ ಬರುತ್ತದೆ ಎಂದರೆ ಸರಿ. 1977 ರಲ್ಲಿ ಸದಾಶಿವ ನಗರದಲ್ಲಿ ಸಿಟಿ ಸರ್ವೆ ವ್ಯಾಪ್ತಿಗೆ ಬಂದಿರುತ್ತದೆ ಎಂದರೆ ಸರಿ. 1363-ಬಿ-1 ಗೆ 3 ಪಾಲುಗಳಾಗಿ ವಿಂಗತಿಸಲಾಗಿ ಸದರಿ ಪಾಲುಗಳಿಗೆ 4855-ಎ, 4856-ಬಿ ಮತ್ತು 4855-ಸಿ ಎಂದು ನಬರಗಳನ್ನು ನೀಡಲಾಗಿದೆ ಎಂದರೆ ಸರಿ. ನನ್ನ ಪ್ಲಾಟ 4855-ಎ ರಲ್ಲಿ ಬರುತ್ತದೆ. 4855-ಎ ಪ್ಲಾಟಗಳಲ್ಲಿ ಎಷ್ಟು ಮನೆಗಳು ಬರುತ್ತವೆ ನನಗೆ ಗೊತ್ತಿಲ್ಲ. ನಾನು ಖರೀದಿ ಮಾಡಿರುವ ಪ್ಲಾಟ ಒಬ್ಬ ಗೊಪಾಲಸಿಂಗ ರಾಮಸಿಂಗ ರಜಪೂತರವರಿಂದ ಖರೀದಿ ಮಾಡಿರುತ್ತೇನೆ. ಗೊಪಾಲಸಿಂಗ ರಾಮಸಿಂಗ ರಜಪೂತರವರು ಹೇಗೆ ಮಾಲೀಕರಾದರು ಎನ್ನುವುದು ನನಗೆ ಗೊತ್ತಿಲ್ಲ. ಜಕ್ಕೂಬಾಯಿ ಮತ್ತು ಗೊಪಾಲಸಿಂಗ ರಾಮಸಿಂಗ ರಜಪೂತರವರ ನಡುವೆ ಖರೀದಿ ಆಗಿರುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಖರೀದಿ ಮಾಡಿರುವ ಪ್ಲಾಟ ನಂ. 4855-74 ರ ಮೂಲ ಮಾಲೀಕರ ಹೆಸರಿನಲ್ಲಿ ಸದರಿ ಜಾಗ ಅವರ ಮಾಲಪಿಕತ್ವದಲಿಪ್ಲಿ ಇರುತ್ತದೆಯೋ ಇಲ್ಲವೋ ಎಂದು ನಾನು ಪರೀಶೀಲನೆ ಮಾಡಿರುತ್ತೇನೆ ಸಾಕ್ಷಿಯು ಮುಂದುವರೆದು ನಾನು ಸರ್ವಿಸದಲ್ಲಿ ಇದ್ದ ಕಾರಣ ದಾಖಲಾತಿಗಳನ್ನು ಪ್ರತ್ಯಕ್ಷ ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಸಹೋದರ ನಾನು ಖರೀದಿ ಮಾಡಿರುವ ಪ್ಲಾಟಿನ ಮೂಲ ಮಾಲಿಕತ್ವದ ದಾಖಲೆಗಳನ್ನು ನೋಡಿ ಖರೀದಿ ಮಾಡಿರುತ್ತಾನೆ ಆದರೆ ಯಾವ ಯಾವ ದಾಖಲೆಗಳನ್ನು ನೋಡಿ ಖರೀದಿ ಮಾಡಿರುತ್ತಾನೆ ನನಗೆ ಗೊತ್ತಿಲ್ಲ. ನನ್ನ ವಕೀಲರಿಗೆ ಈ ದಾವೆ ಹೂಡುವ ಸಮಯದಲ್ಲಿ ನನ್ನ ಸಹೋದರ ಮಾಹಿತಿ ನೀಡಲು ಬಂದಿರುವುದಿಲ್ಲ.ನಾನು ನಮ್ಮ ವಕೀಲರಿಗೆ ನಾನು ಖರೀದಿ ಪಡೆದ ದಾವಾ ಆಸ್ತಿಯ ಮೂಲ ಮಾಲೀಕರು ಹೇಗೆ ಆದರು ಎಂದು ಮಾಹಿತಿ ನೀಡಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಮೂಂದೂಡಲಾಯಿತು.

(ಸಾಕ್ಷಿಯ ಹೇಳಿ ಕೆಯನ್ನು ತೆ.ನ್ಯಾ.ದಲ್ಲಿ ನನ್ನ ಉಕ್ತಲೇಖ ನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಯಿದೆ.

-ಸಹಿ-
3ನೇ ಅಧಿಕ ಸಿವಿಲ್ ಮತ್ತು ಜೆಎಮಎಫ್‌ಸಿ ನ್ಯಾಯಾಧೀಶರು,
ಬೆಳಗಾವಿ.